# ಪ್ರಧಾನ ದಿವಾಣಿ ನ್ಯಾಯಾಲಯ ಹಾಗೂ ಪ್ರ.ದ.ನ್ಯಾದಂಡಾಧಿಕಾರಿಗಳು, ಅಥಣಿ

---

ಸಿ.ಸಿ.ನಂ : **187/2012** ದಿನಾಂಕ : **08/9/2023**
ಸಿ. ಡಬ್ಲೂ : **4**
ಪಿಡಬ್ಲೂ : **2**

---

| | | |
|---|---|---|
| ಸಾಕ್ಷಿದಾರರ ಹೆಸರು | : | ಜನಾರ್ಧನ ತುಕಾರಾಮ ಪಾವಳೆ |
| ವಯಸ್ಸು | : | 69 ವರ್ಷ |
| ಉದ್ಯೋಗ | : | ನಿವೃತ್ತ ಎ.ಎಸ.ಐ |
| ವಾಸಸ್ಥಳ | : | ಬೆಳಗಾವಿ |
| ದಿನಾಂಕ | : | **08/9/2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು. |

---

* * *

<u>ಮುಖ್ಯ ವಿಚಾರಣೆ : ಸ.ಸ.ಅ. ವಕೀಲರವರಿಂದಃ</u>

ಈ ಪ್ರಕರಣ ದಾಖಲಾದಾಗ ನಾನು ಎ.ಎಸ.ಐ ಅಂತಾ ಅಥಣಿ ಠಾಣೆಯಲ್ಲಿ ಕೆಲಸ ನಿರ್ವಹಿಸಿರುತ್ತೇನೆ.

ದಿಃ 07.07.2010 ರಂದು ಚಾಸಾ 1 ರವರು, ನನಗೆ , ಚಾಸಾ-4 ರಿಂದ 8 ರವರಿಗೆ ಕಛೇರಿಗೆ ಕರೆಯಿಸಿ ಮಾಹಿತಿ ಬಂದ ಮೇರೆಗೆ ದಾಳಿಗೆ ಹೋಗಬೇಕಾಗಿರುತ್ತದೆ ಅಂತಾ ತಿಳಿಸಿರುತ್ತಾರೆ. ಚಾಸಾ-1 ರವರು ಪಂಚರನ್ನು ಹಾಜರು ಪಡಿಸಿಕೊಂಡರು. ನಂತರ ನಾನು , ಚಾಸಾ-1, 2, 3, 5 ರಿಂದ 8 ರವರು ಸೇರಿಕೊಂಡು ಇಲಾಖಾ ವಾಹನದಲ್ಲಿ ಶಿವನೂರ ಕ್ರಾಸಗೆ ಮದ್ಯಾಹ್ನ 1.30 ಗೆ ಹೋಗಿರುತ್ತೇವೆ, ಅಲ್ಲಿ ನಾವು ಕಾಯ್ದು ನೋಡಲಾಗಿ ಜಂಬಗಿ ಕಡೆಯಿಂದ ಒಂದು ಬುಲೆರೊ ಮಾಕ್ಸಿ ಟ್ರಕ ಬಂದಿತ್ತು, ಅದರಲ್ಲಿದ್ದ ವ್ಯಕ್ತಿಗಳು ನಮ್ಮನ್ನು ನೋಡಿ ಸ್ವಲ್ಪ ದೂರದಿಂದ ಓಡಿ ಹೋದರು, ಅವರನ್ನು ನಾವು ಹಿಡಿಯಲು ಪ್ರಯತ್ನಿಸಿದರೂ ಸಿಗಲಿಲ್ಲ. ಸದರಿ ವಾಹನವನ್ನು ನಿಂತ ಸ್ಥಳಕ್ಕೆ ನಾವು ಹೋಗಿ ನೋಡಲಾಗಿ ಅದರ ನಂಬರ ಎಮಹೆಚ-10/ಎಕ್ಯೂ-1244 ಇತ್ತು. ಅದು ಬಾತ್ಮಿ ಬಂದ ವಾಹನವಾಗಿತ್ತು. ಸದರಿ ವಾಹನದಲ್ಲಿ 11 ರಟ್ಟಿನ ಪೆಟ್ಟಿಗೆಗಳು , 27 ಬ್ರೌನ ಪೇಪರನ್ನು ಸುತ್ತಿದ ಪ್ಯಾಕೇಟಗಳು , ಸ್ಪೋಟಕ ವಸ್ತುಗಳು ಇದ್ದವು. ಸದರಿ ವಸ್ತುಗಳನ್ನು ಅನಧೀಕೃತವಾಗಿ ಸಾಗಾಣಿಕೆ ಮಾಡುತ್ತಿದ್ದಾರೆ ಅಂತಾ ಕಂಡು ಬಂದಿತ್ತು. ಸದರಿ ವಸ್ತುಗಳನ್ನು, ಜಯಚಂದ್ರ ಅಂತಾ ಬರೆದ ಚುನಾವಣಾ ಗುರುತಿನ ಚೀಟಿ, ಒಚರ, ಇನವಾಯ್, ಕ್ಯಾಶ ಮೆಮೊ ದಾಖಲಾತಿಗಳನ್ನು ಚಾಸಾ-1 ರವರು ಪಂಚರ ಸಮಕ್ಷಮ ಅಮಾನತ್ತು ಪಡಿಸಿಕೊಂಡಿರುತ್ತಾರೆ. ಸ್ಥಳದಲ್ಲಿ 2 ಟ್ಯೂಬಗಳನ್ನು, 2 ಡಿಟೊನೆಟರ ಸ್ಪೋಟಕ ವಸ್ತುಗಳನ್ನು ಎಫಎಸಎಲಗಾಗಿ ತೆಗೆಯಲಾಗಿರುತ್ತದೆ.

ಸ್ಥಳದಲ್ಲಿ ಪಂಚನಾಮೆ ಮಾಡಿಕೊಂಡು ಎಲ್ಲ ವಸ್ತುಗಳನ್ನು ತೆಗೆದುಕೊಂಡು ಠಾಣಗೆ ಬಂದು ಚಾಸಾ-1 ರವರು ದೂರು ನೀಡಿರುತ್ತಾರೆ. ದಿಃ 10.8.2010 ರಂದು ನಾನು 1 ನೇ ಆರೋಪಿತನನ್ನು ನೋಡಿ ಗುರುತಿಸಿ ಹೇಳಿಕೆ ನೀಡಿರುತ್ತೇನೆ. 1 ನೇ ಆರೋಪಿತನು ತನ್ನೊಂದಿಗೆ ಆ ದಿನ ಜಯಚಂದ್ರ ಎಂಬ ವ್ಯಕ್ತಿಯು ಘಟನಾ ದಿನ ಇದ್ದನು ಅಂತಾ ಹೇಳಿರುತ್ತಾನೆ. ನಾನು ಘಟನೆ ಕುರಿತು ಹೇಳಿರುತ್ತೇನೆ. ಸಾಕ್ಷಿಯು ಮುಮಾ1, 2, ನಿಪಿ -2 ರಿಂದ 5 ನೇದವುಗಳನ್ನು ನೋಡಿ ಗುರುತಿಸುತ್ತಾರೆ. ಆರೋಪಿತರನ್ನು ನೋಡಿ ಗುರುತಿಸುತ್ತೇನೆ. ಆರೋಪಿತರು ಗೈರು ಹಾಜರು ಇದ್ದು , ಮಾನ್ಯ ಆರೋಪಿತರ ಪರ ವಕೀಲರ ಪರವಾಗಿ ಕುಮಾರಿ ಟಿ ಡಿ ಎ ವಕೀಲರು ಆರೋಪಿತರನ್ನು ಗುರುತಿಸುವಿಕೆಯ ಬಗ್ಗೆ ತಕರಾರು ಇಲ್ಲ ಅಂತಾ ತಿಳಿಸಿರುತ್ತಾರೆ.

<u>ಪಾಟೀ ಸವಾಲುಃ</u> ಆರೋಪಿ ಪರ ವಕೀಲರಾದ ಶ್ರೀ.ಕೆ ವಿ ಎ ಪರವಾಗಿ ಕುಮಾರಿ ಟಿ ಡಿ ಎ ವಕೀಲರು ಹಾಜರು ಇದ್ದು, ಪಾಟೀ ಸವಾಲಿಗೆ ಸಮಯ ಕೋರಿರುತ್ತಾರೆ, ಪ್ರಕರಣ 2012 ನೇ ಸಾಲಿನದು ಆಗಿರುತ್ತದೆ. ಪಾಟೀ ಸವಾಲಿಗೆ ಮೂಂದುಡಲು ಯಾವುದೇ ಸಮಂಜಸ ಕಾರಣ ಇರುವುದಿಲ್ಲ , ಆ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

<u>ಮರು ವಿಚಾರಣೆ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

(ಜಗದೀಶ ಬಿಸೇರೊಟ್ಟಿ)
ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ.ನ್ಯಾಯಾಲಯ, ಅಥಣಿ